# ‘ಡಿಪಿಆರ್ ಸಿದ್ಧಪಡಿಸಿದ್ದು ಕಪ್ಪುಪಟ್ಟಿಗೆ ಸೇರಿದ ಕಂಪೆನಿ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಉಕ್ಕಿನ ಸೇತುವೆಯ ವಿಸ್ತೃತ ಯೋಜನಾ ವರದಿಯನ್ನು ಕೇರಳ ಸರ್ಕಾರವು ಕಪ್ಪುಪಟ್ಟಿಗೆ ಸೇರಿಸಿದ್ದ ಕಂಪೆನಿಯು ಸಿದ್ಧಪಡಿಸಿದೆ’ ಎಂದು ನಿವೃತ್ತ ಐಎಎಸ್ ಅಧಿಕಾರಿ ಎಂ.ಎನ್.ವಿಜಯಕುಮಾರ್ ಆರೋಪಿಸಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಎಸ್‌ಟಿಯುಪಿ ಕನ್ಸಲ್ಟಂಟ್ಸ್ ಇಂಡಿಯಾ ಕಂಪೆನಿಯು ಉಕ್ಕಿನ ಸೇತುವೆಯ ಡಿಪಿಆರ್ ಸಿದ್ಧಪಡಿಸಿದೆ. ಈ ಕಂಪೆನಿಯನ್ನು ಕಪ್ಪುಪಟ್ಟಿಗೆ ಸೇರಿಸಿದ್ದ ಕೇರಳ ಸರ್ಕಾರದ ನಿರ್ಧಾರವನ್ನು ಅಲ್ಲಿನ ಹೈಕೋರ್ಟ್ ಎತ್ತಿ ಹಿಡಿದಿತ್ತು. ಈ ಅಂಶ ನಮ್ಮ ಅಧಿಕಾರಿಗಳಿಗೆ ಗೊತ್ತಿರಲಿಲ್ಲವೇ? ಅಥವಾ ಅಧಿಕಾರಿಗಳು ಮಾಹಿತಿ ನೀಡಿದ ಬಳಿಕವೂ ಸರ್ಕಾರ ನಿರ್ಧಾರ ಕೈಗೊಂಡಿದೆಯೇ ಎಂಬ ಅಂಶ ಜನರಿಗೆ ತಿಳಿಯಬೇಕು’ ಎಂದರು.

‘ಕಪ್ಪುಪಟ್ಟಿಗೆ ಸೇರಿರುವ ಕಂಪೆನಿಗೆ ಟೆಂಡರ್‌ನಲ್ಲಿ ಭಾಗವಹಿಸಲು ಅವಕಾಶ ಕೊಟ್ಟಿರುವುದು, ಒಂದೇ ಕಂಪೆನಿ ಬಿಡ್ ಮಾಡಿದ್ದರಿಂದ ಉಂಟಾಗಬಹುದಾದ ತೊಂದರೆಗಳನ್ನು ತಡೆಯಲು ಬಿಡ್ ಮಾಡಲು ನಿಗದಿಯಾಗಿದ್ದ ಕಾಲಾವಕಾಶವನ್ನು ಪದೇ ಪದೇ ಮುಂದೂಡಿರುವುದು ಕೂಡ ಸಂಶಯಕ್ಕೆ ಕಾರಣವಾಗಿದೆ’ ಎಂದು ಹೇಳಿದರು.

**ಕೃತಿಚೌರ್ಯ?:** ‘ಉಕ್ಕಿನ ಸೇತುವೆಯ ಬಿಡ್ ಡಾಕ್ಯುಮೆಂಟ್, ಗ್ರೇಟರ್ ಹೈದರಾಬಾದ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ಗಾಗಿ ಸಿದ್ಧಪಡಿಸಿದ ವರದಿಯ ಕೃತಿಚೌರ್ಯ ಆಗಿರುವ ಸಂದೇಹ ಇದೆ. ಇದರ ಬಗ್ಗೆ ಹೆಚ್ಚಿನ ತನಿಖೆ ನಡೆದರೆ, ಈ ಯೋಜನೆಯ ಟೆಂಡರ್‌ನಲ್ಲಿ ಬೇರೆ ಕಂಪೆನಿಗಳು ಭಾಗವಹಿಸದಂತೆ ಹೇಗೆ ತಡೆಯಲಾಯಿತು ಎಂಬ ಅಂಶ ಬೆಳಕಿಗೆ ಬರುವ ಸಾಧ್ಯತೆ ಇದೆ’ ಎಂದರು.

‘ಸರಿಯಾದ ಸ್ಪಷ್ಟನೆಗಳನ್ನು ನೀಡದ ಬಿಡಿಎ, ವಿವಿಧ ಅಂತರರಾಷ್ಟ್ರೀಯ ಕಂಪೆನಿಗಳು ಈ ಯೋಜನೆಯ ಟೆಂಡರ್‌ನಲ್ಲಿ ಭಾಗವಹಿಸದಂತೆ ತಡೆದಿದೆ. ಕೇಂದ್ರದ ಧನಸಹಾಯ ಪಡೆಯುವ ರೀತಿಯಲ್ಲಿ ಯೋಜನೆಯನ್ನು ಸಿದ್ಧಪಡಿಸಿಲ್ಲ. ಡಿಪಿಆರ್ ಸಿದ್ಧವಾದ ಒಂದು ವರ್ಷದ ಬಳಿಕವೂ ಬಿಡಿಎ ಈ ಯೋಜನೆಗೆ ಅಗತ್ಯವಾದ ಶೇ 100 ರಷ್ಟು ಭೂಮಿ ಒದಗಿಸುವ ಭರವಸೆ ಕೊಟ್ಟಿಲ್ಲ. ನಿಗದಿಯಾಗಿರುವ ಯೋಜನಾ ವೆಚ್ಚದಲ್ಲಿ ಸೇರದ ಕೆಲವು ಸಾಮಗ್ರಿಗಳನ್ನು ಅಳತೆ ಮಾಡಿದ ಮೇಲೆ ವೆಚ್ಚ ಭರಿಸಲಾಗುವುದು ಎಂದು ಹೇಳಿದೆ. ಇವೆಲ್ಲವೂ ಗೊಂದಲಗಳಿಗೆ ಕಾರಣವಾಗಿದೆ’ ಎಂದು ವಿವರಿಸಿದರು.

‘ಗೊಂದಲಗಳಿಗೆ ಸಂಬಂಧಿಸಿದಂತೆ ಮಾಹಿತಿ ನೀಡುವಂತೆ ಬಿಡಿಎ ಅಧ್ಯಕ್ಷ ಮಹೇಂದ್ರ ಜೈನ್, ಆಯುಕ್ತ ರಾಜಕುಮಾರ್ ಖತ್ರಿ ಅವರಿಗೂ ಪತ್ರ ಬರೆದಿದ್ದೇನೆ. ಸಂಬಂಧಪಟ್ಟವರು ಇದೇ 28ರೊಳಗೆ ಸ್ಪಷ್ಟನೆ ನೀಡದಿದ್ದರೆ ಎಸಿಬಿಗೆ ದೂರು ನೀಡುತ್ತೇನೆ’ ಎಂದರು.

‘ಬಿಡಿಎ ನೀಡಿರುವ ಮಾಹಿತಿ ಹಾಗೂ ಡಿಪಿಆರ್‌ನಲ್ಲಿರುವ ಕೆಲವು ಅಂಶಗಳು ತದ್ವಿರುದ್ಧವಾಗಿದೆ. ಉಕ್ಕಿನ ಸೇತುವೆ ವಿರೋಧಿಸಿ ಸಾಕಷ್ಟು ಪ್ರತಿಭಟನೆಗಳು ನಡೆಯುತ್ತಿದ್ದರೂ ಸರ್ಕಾರ ಮಾತ್ರ, ಇದನ್ನು ನಿರ್ಮಿಸಲು ಪಟ್ಟುಹಿಡಿದಿರುವುದು ಏಕೆ’ ಎಂದು ಅವರು ಪ್ರಶ್ನಿಸಿದರು.